


ಬೆಂಬಲ ಬೆಲೆಗಾಗಿ ಒತ್ತಾಯಿಸುವ ಸಭೆಗೆ ಇಲ್ಲಿಂದ ಮೆರವಣಿಗೆಯಲ್ಲಿ ತಾಲ್ಲೂಕಾಫೀಸಿಗೆ ಹೋಗುವುದಿತ್ತು. ರೈತರು ಬಂದು ನೆರೆಯುತ್ತಿದ್ದರು. ಅಲ್ಲಲ್ಲಿ ಪೊಲೀಸರು ನಿಂತಿದ್ದರು. ಆಗಲೇ ಚೇಳೂರಿನಿಂದ ಬಸ್ಸು ಬಂದಿತು. ಇಳಿದ ರೈತರಿಬ್ಬರು ಮೆರವಣಿಗೆಯಲ್ಲಿ ಕೊಂಡೊಯ್ಯಲು ತಂದಿದ್ದ, ಅರ್ಧರ್ಧ ರಾಗಿಯಿದ್ದ ಮೂಟೆಗಳನ್ನು ಇಳಿಸಲು ಬಸ್ಸಿನ ಮೇಲೇರಿದರು. ಆಗ ಶುರುವಾಯಿತು, ಒಂದಿಬ್ಬರು ಕೂಲಿಕಾರರಿಂದ – 'ಮೂಟೆ ಇಳಿಸಬೇಕಾದವರು ನಾವು, ನೀವಲ್ಲ'ವೆಂಬ ತಕರಾರು.

ರೈತರು ಬಸ್ಸಿನ ಬಳಿಗೆ ಬಂದರು. ಕೂಲಿಕಾರರೂ ಬಂದರು. ಪೊಲೀಸರು ಜಾಗೃತರಾದರು. ಎರಡು ಗುಂಪಿನ ನಡುವೆ ಗದ್ದಲ. ತಳ್ಳಾಟ. ಎರಡು ವರ್ಗದ ನಡುವಿನ ಬಹುಕಾಲದ ಅಸಮಾಧಾನ ಬುಸುಗುಟ್ಟಿತು. ಪೊಲೀಸರು ಲಾಠಿಗಳಿಂದ ಜನರ ಕಾಲ ಬಳಿ ನೆಲಕ್ಕೆ ಬಡಿತುತ್ತ ಜನರನ್ನು ಚದುರಿಸತೊಡಗಿದರು. ಆಗ ಶುರುವಾದ ನೂಕುನುಗ್ಗಲು ಬರಬರುತ್ತ ಹೆಚ್ಚಾಯಿತು.

ಗುಂಪಿನ ಮಧ್ಯೆ ಇದ್ದವನೊಬ್ಬ ತನ್ನ ಮುಂದಿದ್ದವರನ್ನು ಪೊಲೀಸರತ್ತ ದೂಡುತಿದ್ದ. ಇದನ್ನು ಕಂಡ ಪೊಲೀಸ್, ಲಾಠಿಯೆತ್ತಿ ಅವನತ್ತ ನುಗ್ಗಿದ. ಅವನು ಓಡುವ ಭರದಲ್ಲಿ ಪಾಪಯ್ಯನನ್ನು ತಳ್ಳಿಕೊಂಡು ನುಗ್ಗಿ ಓಡಿ ಹೋದ. ಪಾಪಯ್ಯ ನೆಲಕ್ಕುರುಳಿದ. ಹೆಗಲಿನ ಚೀಲ ಜಾರಿ ನೆಲದ ಮೇಲೆ ಬಿದ್ದಿತು. ಅದರಲ್ಲಿದ್ದ ಮುರಿದ ಮಚ್ಚು ಹೊರಬಿದ್ದಿತು. ಅಲ್ಲಿಯೇ ಇದ್ದ ಪೊಲೀಸರಿಬ್ಬರು ಪಾಪಯ್ಯನ ರಟ್ಟೆಗಳನ್ನು ಹಿಡಿದುಕೊಂಡರು. ಪ್ರೆಸ್ಸಿನವರು ಫೋಟೊ ತೆಗೆದರು.

ಮಾರನೆಯ ದಿನ ಪತ್ರಿಕೆಗಳಲ್ಲಿ ಹೆಡ್‌ಲೈನ್ ಸುದ್ದಿ: ರೈತನಿಂದ ಬಸ್ ನಿಲ್ದಾಣದ ಹಮಾಲಿಗಳ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಪ್ರಯತ್ನ, ಪೊಲೀಸರಿಂದ ತಪ್ಪಿದ ಅನಾಹುತ.

***

ಪಾಪಯ್ಯನ ಬಂಧನದ ನಂತರ ಪೊಲೀಸ್ ಠಾಣೆ ಹಾಗೂ ಕೋರ್ಟಿನಲ್ಲಿ ನಡೆಯುತ್ತಿದ್ದ ಯಾವುದಕ್ಕೂ ವೇಗವೆಂಬುದೇ ಇಲ್ಲವೆಂಬಂತೆ ಅತಿ ನಿಧಾನವಾಗಿ ನಡೆಯುತ್ತಿತ್ತು. ಈಗ ಆಗಬೇಕಿದ್ದುದು ನಾಳೆ ಆದರೆ ಆಯಿತು, ಇಲ್ಲವೆಂದರೆ ಇಲ್ಲ ಅನ್ನುವಂತೆ. ಇದರಿಂದ ಪಾಪಯ್ಯ ಅಸಹನೆಗೆ ಒಳಗಾಗುತ್ತಿದ್ದ. ಅದು ಅವನೊಳಗೇ ಇಟ್ಟುಕೊಂಡಿರಬೇಕಾದ ಪರಿಸ್ಥಿತಿ. ಇದು ಕುಟುಂಬದವರಲ್ಲಿ ಆತಂಕ ಹೆಚ್ಚಿಸುತ್ತಿತ್ತು. ವಕೀಲ ಹೇಳುತ್ತಿದ್ದುದು ಒಂದೇ ಮಾತು: ನ್ಯಾಯಾಲಯದ ವ್ಯವಹಾರ ನಮ್ಮ ಆತುರಕ್ಕೆ ತಕ್ಕಂತೆ ಸಾಗುವುದಿಲ್ಲ. ಕಾಯಲೇ ಬೇಕು. ಜಾಮೀನು ಸಿಗುವುದು ತಡವಾದೀತು. ಆದರೆ ಸಿಗುವುದು ಗ್ಯಾರಂಟಿ. ಪೊಲೀಸರ ಮೇಲೆ ಯಾರದೇ ಒತ್ತಡವಿಲ್ಲವಾಗಿ ಟ್ರೀಟ್‌ಮೆಂಟಿನ ಭಯವಿಲ್ಲ. ಆದ್ದರಿಂದ ಆತಂಕಕ್ಕೆ ಕಾರಣವಿಲ್ಲ.

ಪಾಪಯ್ಯ ಜಾಮೀನಿನ ಮೇಲೆ ಬಿಡುಗಡೆಯಾದ ನಂತರ ಆರು ತಿಂಗಳ ಕಾಲ 'ಆಗ ಬಾ ಈಗ ಬಾ' ಎಂದು ವಿಚಾರಣೆ ಸಾಗಿತು. ವಾದ, ಪ್ರತಿವಾದಗಳು ನಡೆದವು. ಪಾಪಯ್ಯನ ಪರ ವಕೀಲರು ಮಂಡಿಸಿದ, 'ಹಲ್ಲೆಕೋರರಾರೂ ತುಂಡು ಮಚ್ಚನ್ನು ಬಳಸುವುದಿಲ್ಲ' ಎಂಬ ಅಂಶವನ್ನು ನ್ಯಾಯಾಲಯ ವಿಶೇಷವಾಗಿ ಗಮನಿಸಿತು. ಕಂದುಲ ವೆಂಕಟೇಶುಲುವಿನ ಸಾಕ್ಷ್ಯ ಸತ್ಯವೆಂದು ನ್ಯಾಯಾಲಯ ಭಾವಿಸಿತು. ಮುಖ್ಯವಾಗಿ ಪಾಪಯ್ಯನಿಗೆ ಯಾವ ಚಿಕ್ಕ ಅಪರಾಧದ ಹಿನ್ನೆಲೆಯೂ ಇರದಿದ್ದುದೂ ಅವನ ಬೆಂಬಲಕ್ಕೆ ಬಂದಿತ್ತು. ಈ ಎಲ್ಲ ಅಂಶಗಳೂ ಪಾಪಯ್ಯ ನಿರಪರಾಧಿಯೆಂದು ಖುಲಾಸೆಗೊಳ್ಳಲು ನೆರವಾದವು.

ತೀರ್ಪಿನ ದಿನಕ್ಕೆ ಹದಿನೆಂಟು ಕುರಿಗಳಲ್ಲಿ ಆರು ಮಾತ್ರ ಉಳಿದುಕೊಂಡಿದ್ದವು. ಅಂದು ಮನೆಮಂದಿ ಕೋರ್ಟಿಗೆ ಹೋಗಿದ್ದರು. ಮನೆಗೆ ಹಿಂದಿರುಗುವಾಗ್ಗೆ, ಅಂಗಳದಲ್ಲಿ ಕಟ್ಟಿ ಮೇವು ಹಾಕಿ ಹೋಗಿದ್ದ ಆರು ಕುರಿಗಳಲ್ಲಿ ಎರಡು ಕಾಣೆಯಾಗಿದ್ದವು. ಗಂಡನ ಕೈ ಹಿಡಿದುಕೊಂಡ ರಂಗಮ್ಮನ ಕಣ್ಣಂಚಿನಲ್ಲಿ ನೀರು ತುಳುಕಿತು. ಪಾಪಯ್ಯ ಉಳಿದ ಕುರಿಗಳ ಮೈದಡವುತ್ತ ಅಂಗಳದಲ್ಲಿ ಕುಳಿತ. ಮಗ ಅಪ್ಪನ ಬೆನ್ನ ಹಿಂದೆ ನಿಂತಿದ್ದ. ಮಗಳು ಮನೆಯೊಳಗೆ ಹೋಗಿ, ಕರೆಂಟು ಹೋಗಿದ್ದರಿಂದ ದೀಪ ಹಚ್ಚಿಟ್ಟಳು.

ರಂಗಮ್ಮ ನೀರಿನೊಲೆಗೆ ಸೌದೆ ಇಟ್ಟು ಬೆಂಕಿ ಹಚ್ಚಿದಳು. ಹರಳೆಣ್ಣೆಯನ್ನು ಬೆಚ್ಚಗೆ ಮಾಡಿ ತಂದು ಗಂಡನ ತಲೆ, ಮೈಗೆ ಹಚ್ಚಿ ತಿಕ್ಕಿದಳು. ನೀರು ಕಾಯುವವರೆಗೆ ನೆನೆಯಲೆಂದು ಬಿಟ್ಟು, ಮಗಳಿಗೆ ಅಡುಗೆ ಕೆಲಸ ನೋಡಲು ಹೇಳಿ, ದನಗಳಿಗೆ ನೀರು, ಮೇವು ನೋಡಲು ಹೋದಳು.

ಹಂಡೆಯಲ್ಲಿ ನೀರು ಹಬೆಯಾಡುತ್ತಿತ್ತು. ಗಂಡನನ್ನು ಕರೆದು ಬಚ್ಚಲಲ್ಲಿ ಕೂರಿಸಿ ನೀರೆರೆದಳು. ಸೆರಗಿನಿಂದ ಅವನ ತಲೆ ಒರೆಸುತ್ತ, 'ಇಂದಿಗೆ ದೊಡ್ಡ ಮೈಲಿಗೆ ಕಳೆಯಿತು' ಎಂದಳು.

ಪ್ರತಿಕ್ರಿಯಿಸಿ: **feedback@sudha.co.in**